ಕರ್ಟಿಸೀ ನೋಟ್ಗಳು.

ಯಿದರಡಿ ನಮೂದಿಸಲ್ಪಡುವ ಪೂರಾ ಕರ್ಟಿಸಿನೋಟುಗಳು ಚಿಕ್ಕ ಮಗಳೂರು ತಾಲ್ಲೂಕು ಮಾವಿನಕೆರೆಯಲ್ಲಿ ಕಳಕೊಳ್ಳಲ್ಪಟ್ಟಿರುತ್ತೆ. ಈ ಸಂಗತೀಯನ್ನು ಪೇಪರ್‌ಕರ್ಟಿಸಿ ಆಫಿಸಿಗೆ ತಿಳಿಯಪಡಿಸಿರುತ್ತೆ, ಯಿವುಗಳನ್ನು ತಂದುಕೊಟ್ಟವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುತ್ತೆ.

ನಂಬರ್	ಸರ್ಕಲ್	ನೋಟ್ ಮೊಬಲಗ್ ರೂ.	ಆ.	ಪೈ.	ನಂಬರ್	ಸರ್ಕಲ್	ನೋಟ್ ಮೊಬಲಗ್ ರೂ.	ಆ.	ಪೈ.
56286	ಮದ್ರಾಸ್	100	0	0	57900	ಮದ್ರಾಸ್	20	0	0
35313	ಡಿಟೋ	100	0	0	41093	ಡಿಟೋ	20	0	0
54402	ಡಿಟೋ	100	0	0	41605	ಡಿಟೋ	20	0	0
85407	ಡಿಟೋ	100	0	0	56259	ಕಲ್ಲೀಕೋಟೆ	20	0	0
35690	ಡಿಟೋ	100	0	0	53500	ಡಿಟೋ	20	0	0
59352	ಡಿಟೋ	100	0	0	2753	ಡಿಟೋ	10	0	0
2051	ಡಿಟೋ	50	0	0	66082	ಡಿಟೋ	10	0	0
63050	ಡಿಟೋ	50	0	0	17885	ಡಿಟೋ	10	0	0

ಬೆಂಗಳೂರು
15ನೇ ಮಾರ್ಚೀ 1876.

ರುಜಾ ಶಾಮಂಣ ಯಂದಿದೆ, ಚಿಕ್ಕ ಮಗಳೂರು ತಾಲ್ಲೂಕು ಮಾವಿನಕೆರೇಯಲ್ಲಿರುವ ಕಲ್ಲಪ್ಪಶೆಟ್ಟರ ಏಜಂಟೆ.

ಪೊಲೀಸ್ ಇಲಾಖಾ.

ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ್‌ಗಳಿಗೆ.

ತಾರೀಖು 18ನೇ ಮಾರ್ಚೀ 1876, ಸರ್ಕ್ಯುಲರ್ ನಂ. 3600—185.

ಸಬ್ ಸ್ಟೇಷ್ಟಗಳ ದಫೇದಾರ್ರುಗಳು ಫಿರ್ಯಾದುಗಳನ್ನು ತೆಗದುಕೊಳ್ಳಲಿಕ್ಕೆ ಯಾವಾಗಲೂ ಸ್ಟೇಷ್ಟಗಳಲ್ಲಿ ಯಿರತಕ್ಕದ್ದೆಂದು ————ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಮ್ಮಿಷನರ್‌ಯವರು ಸರ್ಕ್ಯುಲರ್ ಹುಕ್ಕುಂ ಕೊಟ್ಟಿರು.

2. ಇದು ಕುದ್ಧ ಅನಾವಶ್ಯಕವಾಗಿ ಯಿರುತ್ತೆ. ಬೀಟುಗಳು ನೆರವೇರಿಸಲ್ಪಡುತ್ತಾ ಯಿರುವದನ್ನೂ ಮತ್ತು ಅಕ್ಕರ್ರೆನ್ಸುಗಳು ರಿಪೋರ್ಟಾಗುತ್ತಾ ಯಿರುವದನ್ನೂ ಸಹಾ ಖುದ್ದು ತಿಳದುಕೊಳ್ಳತಕ್ಕ ಬಗ್ಗೆ ದಫೇದಾರನು ವಾರಕ್ಕೆ ಮೊಂದಾವರ್ತಿ ಯರಡು ದಫಾ ಯಾ 3 ದಫಾ ಗಸ್ತು ಮಾಡಬೇಕು.

3. ಸಬ್ ಸ್ಟೇಷನ್ನಲ್ಲಿ ಯಾವದಾದರು ಫಿರ್ಯಾದು ಮಾಡಲ್ಪಟ್ಟರೂ, ಅಥವಾ ಅಕ್ಕರ್ರೆನ್ಸ್ ರಿಪೋರ್ಟು ಮಾಡಲ್ಪಟ್ಟರೂ, ಹಾಜರಿರುವ ಸೀನಿಯರ್ ಆಫಿಸರನು ದಫೇದಾರನನ್ನು ಕೂಡ್ಲೇ ಕರಿಸಿಕೊಳ್ಳಬೆಕಲ್ಲದೆ ಯಾವ ಹೆಡ್ ಸ್ಟೇಷನ್ನಿಗೆ ಸದರೀ ಸಬ್ ಸ್ಟೇಷ್ಟ ಸೇರಿಸಲ್ಪಟ್ಟಿರುತ್ತೋ ಅಂತಾ ಹೆಡ್ ಸ್ಟೇಷನ್ನಿನ ಜವೇದಾರನನ್ನು ಸಹಾ ಕರಿಸಿಕೊಳ್ಳಬೇಕು, ಜವೇದಾರನು ತನ್ನ ಹೆಡ್ ಸ್ಟೇಷನ್ನಿನ ಸರಹದ್ದಿನೊಳಗೂ ಮತ್ತು ತನ್ನ ತಮಾಂ ಸಬ್ ಸ್ಟೇಷ್ಟಗಳ ಸರಹದ್ದುಗಳೊಳಗೂ, "ಸ್ಟೇಷ್ಟ ಹೌಸ್ ಆಫಿಸರ್"ನಾಗಿ ಯಿರುತ್ತಾನೆ, ಮತ್ತು ಸದರೀ ಸರಹದ್ದುಗಳೊಳಗೆ ಸಂಭವಿಸುವ ಮೊಕದ್ದಮೆಗಳನ್ನು ವಿಚಾರಣೆ ಮಾಡಲಿಕ್ಕೆ ಜವೇದಾರನು ಹೋಗತಕ್ಕದ್ದು. ಸಬ್ ಸ್ಟೇಷ್ಟಗಳ ದಫೇದಾರ್ರುಗಳು ಜವೇದಾರನ ಗೈರ್‌ಹಾಜರೀಯಲ್ಲಿ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 136ನೇ ಸೆಕ್ಷನ್ ಪ್ರಕಾರ ಆವಶ್ಯಕವಾದ ಕೆಲಸವನ್ನು ನಡಿಸತಕ್ಕದ್ದು.

H. T. PRINSEP,
Offg. Inspector General of Police.

MYSORE GOVERNMENT PRESS, BANGALORE—1876.